

# ಇದು ವಿ‘ಭಿನ್ನ’

‘ಶುದ್ಧಿ’ ಸಿನಿಮಾದ ಮೂಲಕ ಗಮನ ಸೆಳೆದಿದ್ದ ನಿರ್ದೇಶಕ ಆದರ್ಶ ಈಶ್ವರಪ್ಪ ಅವರು ಮತ್ತೊಂದು ‘ಭಿನ್ನ’ ಧ್ವನಿಯ ಸಿನಿಮಾದೊಂದಿಗೆ ಪ್ರೇಕ್ಷಕರಿಗೆ ಮುಖಾಮುಖಿಯಾಗಲು ಸಜ್ಜಾಗಿದ್ದಾರೆ. ಅಂದಹಾಗೆ ಅವರ ಎರಡನೇ ಸಿನಿಮಾ ಹೆಸರು ‘ಭಿನ್ನ’.

ಕೇವಲ 23 ದಿನಗಳಲ್ಲಿ ಚಿತ್ರೀಕರಣ ಮುಗಿಸಿ ಗಮನಸೆಳೆದಿದ್ದ ಚಿತ್ರತಂಡ ಇದೀಗ ಪ್ರಮಾಣೀಕರಣ ಮಂಡಳಿಯ ಪರೀಕ್ಷೆಯನ್ನೂ ಹಾದು, ‘ಯು/ಎ’ ಪ್ರಮಾಣಪತ್ರ ಪಡೆದುಕೊಂಡಿದೆ. ಚಿತ್ರವನ್ನು ವೀಕ್ಷಿಸಿ ಬಹಳ ಮೆಚ್ಚಿಕೊಂಡಿರುವ ಮಂಡಳಿಯವರು ‘ಅಂತರರಾಷ್ಟ್ರೀಯ ಚಿತ್ರೋತ್ಸವಗಳಲ್ಲಿ ಭಾಗವಹಿಸಿ’ ಎಂಬ ಸಲಹೆಯನ್ನೂ ನೀಡಿದ್ದಾರಂತೆ.

‘ನಮ್ಮ ಸಿನಿಮಾಗೆ ಯಾವುದೇ ಕಟ್ ಇಲ್ಲದೆ ‘ಯು/ಎ’ ಪ್ರಮಾಣಪತ್ರ ಸಿಕ್ಕಿರುವುದು ಸಾಕಷ್ಟು ಖುಷಿ ಕೊಟ್ಟಿದೆ. ಈಗಾಗಲೇ ನಮ್ಮ ಆಪ್ತರ ಬಳಗದ ಎದುರು ಮೂರು ಸಲ ಚಿತ್ರವನ್ನು ಪ್ರದರ್ಶಿಸಿ ಅವರ ಅಭಿಪ್ರಾಯ ಪಡೆದುಕೊಂಡಿದ್ದೇವೆ. ಎಲ್ಲರೂ ತುಂಬ ಎಕ್ಸೈಟ್ ಆಗಿದ್ದಾರೆ. ಚಿತ್ರದ ಮುಖ್ಯಭೂಮಿಕೆಯಲ್ಲಿ ನಟಿಸಿರುವ ಕಲಾವಿದರ ನಟನೆಯ ಕುರಿತೂ ಸಾಕಷ್ಟು ಮೆಚ್ಚುಗೆ ವ್ಯಕ್ತವಾಗಿದೆ’ ಎಂದು ಹೇಳಿಕೊಳ್ಳುವ ಆದರ್ಶ್, ‘ಇವೆಲ್ಲ ಆಗಿದ್ದು ಇಡೀ ತಂಡದ ಪರಿಶ್ರಮದಿಂದ’ ಎಂದು ಹೇಳಲು ಮರೆಯುವುದಿಲ್ಲ.

ಚಿತ್ರದ ಬಹುಪಾಲು ಕಥೆ ನಡೆಯುವುದು ರಾತ್ರಿ ಹೊತ್ತಿನಲ್ಲಿ. 23 ದಿನಗಳಲ್ಲಿ 19 ದಿನಗಳ ಕಾಲ ನೈಟ್ ಶೂಟ್ ಮಾಡಲಾಗಿದೆ. ಅಮೆರಿಕದ ಆ್ಯಂಡ್ರೂ ಐಲೂ ಈ ಚಿತ್ರಕ್ಕೆ ಛಾಯಾಗ್ರಹಣ ಮಾಡಿದ್ದಾರೆ. ನಂದಿಬೆಟ್ಟ ಮತ್ತು ಚಿಕ್ಕಮಗಳೂರಿನಲ್ಲಿ ‘ಭಿನ್ನ’ದ ಬಹುಪಾಲು ಚಿತ್ರೀಕರಿಸಿಕೊಳ್ಳಲಾಗಿದೆ.

‘ಭಿನ್ನ’ ಎಂಬ ಶಬ್ದಕ್ಕೆ ಒಡೆದ ಎಂಬ ಅರ್ಥವೂ ಇದೆ. ಈ ಶಬ್ದಕ್ಕಿರುವ ಎರಡೂ ಅರ್ಥಸಾಧ್ಯತೆಗಳನ್ನು ಗಮನದಲ್ಲಿಟ್ಟುಕೊಂಡೇ ಈ ಶೀರ್ಷಿಕೆಯನ್ನು ಇರಿಸಿಕೊಂಡಿರುವುದಂತೆ. ಆ ಎರಡೂ ಅರ್ಥಗಳು ಹೇಗೆ ಕಥೆಗೆ ಅನ್ವಯಿಸುತ್ತವೆ ಎನ್ನಲು ಸಿನಿಮಾವನ್ನೇ ನೋಡಬೇಕು. ಮಾರ್ಚ್ ಅಂತ್ಯ ಅಥವಾ ಏಪ್ರಿಲ್ ಆರಂಭದಲ್ಲಿ ಚಿತ್ರ ಬಿಡುಗಡೆ ಮಾಡುವ ಆಲೋಚನೆಯಲ್ಲಿ ಚಿತ್ರತಂಡ ಇದೆ. ಕರ್ನಾಟಕದ ಜತೆಗೆ ಯುರೋಪ್ ದೇಶಗಳು, ಅರಬ್‌ನಲ್ಲಿಯೂ ಬಿಡುಗಡೆ ಮಾಡುವ ಸಾಧ್ಯತೆಗಳ ಬಗ್ಗೆಯೂ ಚಿಂತನೆ ನಡೆಸಲಾಗುತ್ತಿದೆ.

ಪರ್ಪಲ್ ರಾಕ್ ಎಂಟರ್‌ಟೈನರ್ಸ್ ನಿರ್ಮಾಣ ಮಾಡಿರುವ ಈ ಚಿತ್ರದಲ್ಲಿ ಪಾಯಲ್ ರಾಧಾಕೃಷ್ಣ, ಸೌಮ್ಯಾ ಜಗನ್‌ಮೂರ್ತಿ, ಸಿದ್ಧಾಂತ್ ಮಾಧ್ಯಮಿಕ, ಶಶಾಂಕ್ ಪುರುಷೋತ್ತಮ್ ಮುಖ್ಯಭೂಮಿಕೆಯಲ್ಲಿದ್ದಾರೆ.

# ಹರಿಪ್ರಿಯಾ ಖುಷಿ ಸವಾರಿ




‘ಈ ವರ್ಷ ನಂದೇ ಹವಾ’ ಅಂತಿದಾರೆ ಹರಿಪ್ರಿಯಾ. ಅವರ ಮಾತಿಗೆ ಪುಷ್ಟಿ ಒದಗಿಸುವಂತೆ ‘ಬೆಲ್‌ಬಾಟಂ’ ಚಿತ್ರಮಂದಿರಗಳಲ್ಲಿ ಚೆನ್ನಾಗಿ ಸದ್ದು ಮಾಡುತ್ತಿದೆ. ‘ಕುರುಕ್ಷೇತ್ರ’, ‘ಕಥಾಸಂಗಮ’, ‘ಸೂಜಿದಾರ’ ಚಿತ್ರಗಳು ಪೂರ್ಣಗೊಂಡಿವೆ. ‘ಕನ್ನಡ್ ಗೊತ್ತಿಲ್ಲ’ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ. ‘ಬಿಚ್ಚುಗತ್ತಿ’, ‘ಎಲ್ಲಿದ್ದೆ ಇಲ್ಲೀತನಕ’ ಚಿತ್ರಗಳು ಚಿತ್ರೀಕರಣ ಹಂತದಲ್ಲಿವೆ.

ಒಟ್ಟಾರೆ ಬ್ಯುಸಿಯಾಗಿದ್ದಾರೆ ಹರಿಪ್ರಿಯಾ. ಇತ್ತೀಚೆಗಷ್ಟೇ ಅವರು ನಾಯಕಿಯಾಗಿ ನಟಿಸಿರುವ 25ನೇ ಚಿತ್ರ ‘d/o ಪಾರ್ವತಮ್ಮ’ ಪ್ರಮಾಣೀಕರಣ ಮಂಡಳಿಯಿಂದ 'ಯು' ಪ್ರಮಾಣಪತ್ರ ಪಡೆದುಕೊಂಡಿದೆ. ಶಂಕರ್ ಜೆ. ಎಂಬ ಯುವ ನಿರ್ದೇಶಕ ನಿರ್ದೇಶಿಸಿರುವ ಈ ಚಿತ್ರದಲ್ಲಿ ಹರಿಪ್ರಿಯಾ ತನಿಖಾಧಿಕಾರಿ ಪಾತ್ರದಲ್ಲಿ ನಟಿಸಿದ್ದಾರೆ. ಅವರ ಅಮ್ಮನಾಗಿ ಸುಮಲತಾ ನಟಿಸಿರುವುದೂ ಈ ಚಿತ್ರದ ವಿಶೇಷಗಳಲ್ಲೊಂದು.

ಹರಿಪ್ರಿಯಾ ನಟಿಸಿರುವ ಚಿತ್ರಗಳ ಹೆಸರನ್ನು ನೋಡಿದರೇ ಅದರಲ್ಲಿನ ವೈವಿಧ್ಯ ಅರಿವಿಗೆ ಬರುವಂತಿದೆ. ಹೊಸ ಹೊಸ ಬಗೆಯ ಪಾತ್ರಗಳಲ್ಲಿ ನಟಿಸುವುದು, ಆ ಮೂಲಕ ತನ್ನೊಳಗಿನ ಕಲಾವಿದೆಯನ್ನು ಇನ್ನಷ್ಟು ಪ್ರಬುದ್ಧೆಯಾಗಿಸಬೇಕು ಎಂಬ ಹಂಬಲದ ಜತೆಗೆ ಹೊಸಬರ ಪ್ರಯೋಗಶೀಲ ಪ್ರಯತ್ನಗಳಿಗೆ ಇಂಬು ನೀಡುವ ಕಾಳಜಿಯೂ ಅವರಿಗಿದೆ. ಈ ವರ್ಷದುದ್ದಕ್ಕೂ ತೆರೆಯ ಮೇಲೆ ಹರಿಪ್ರಿಯಾ ಸಿನಿಮಾಗಳ ಮೆರವಣಿಗೆ ನಡೆಯುವುದಂತೂ ಖಚಿತ.